# ಕರ್ನಾಟಕವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 171(147) |
| ಸದಸ್ಯರ ಹೆಸರು | : | ಶ್ರೀ. ಕೆ. ಪ್ರತಾಪ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10-12-2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ದೊಡ್ಡ ಮಟ್ಟದ ಪ್ರವಾಹ ಉಂಟಾಗಿ ಜಿಲ್ಲೆಯಾದ್ಯಂತ ಹಲವಾರು ತೋಟಗಳು ಜಲಾವೃತ ಗೊಂಡಿದ್ದು, ತೋಟಗಾರಿಕೆ ಬೆಳೆಗಳು ಸಾಕಷ್ಟು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ | ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಸಂಭವಿಸಿದ ಪ್ರವಾಹದಿಂದಾಗಿ ಹಾಳಾಗಿರುವ ತೋಟಗಾರಿಕೆ ಬೆಳೆಗಳ ಒಟ್ಟು ವಿಸ್ತೀರ್ಣವೆಷ್ಟು; ನಷ್ಟದ ಒಟ್ಟು ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಪ್ರಸ್ತುತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ 24.61 ಹೆಕ್ಟೇರ್ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ. ತಾಲ್ಲೂಕುವಾರು ವಿಸ್ತೀರ್ಣ ಹಾಗೂ ನಷ್ಟದ ವಿವರ ಕೆಳಗಿನಂತಿದೆ:- |

| ಕ್ರ. ಸಂ. | ತಾಲ್ಲೂಕು | ಹಾನಿಯಾಗಿರುವ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ (ಹೆ) | ನಷ್ಟದ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|
| 1 | ಮಂಗಳೂರು | 3.570 | 11.78 |
| 2 | ಬಂಟ್ವಾಳ | 7.230 | 23.85 |
| 3 | ಬೆಳ್ತಂಗಡಿ | 1.156 | 3.82 |
| 4 | ಪುತ್ತೂರು | 3.610 | 10.87 |
| 5 | ಸುಳ್ಯ | 0.591 | 1.82 |
| 6 | ಕಡಬ | 2.020 | 4.84 |
| 7 | ಮೂಡ ಬಿದಿರೆ | 1.535 | 5.06 |
| 8 | ಮುಲ್ಕಿ | 0.000 | 0.00 |

| | | | |
|---|---|---|---|
| 9 | ಉಳ್ಳಾಲ | 4.900 | 16.05 |
| | **ಒಟ್ಟು** | **24.61** | **78.13** |

| | | |
|---|---|---|
| ಇ | ಸರ್ಕಾರವು ಸಂಕಷ್ಟಕ್ಕೀಡಾಗಿರುವ ತೋಟಗಾರಿಕೆ ಬೆಳೆಗಾರರಿಗೆ ಪರಿಹಾರದ ಪೂರ್ಣ ಮೊತ್ತವನ್ನು ಈಗಾಗಲೇ ಪಾವತಿಸಿದೆಯೇ; ಇಲ್ಲದಿದ್ದಲ್ಲಿ ಇನ್ನೂ ಬಾಕಿ ಇರುವ ಪರಿಹಾರದ ಮೊತ್ತವೆಷ್ಟು; | ಕಂದಾಯ ಇಲಾಖೆಯ ವತಿಯಿಂದ NDRF/SDRF ಮಾರ್ಗಸೂಚಿಯನ್ವಯ 219 ಜನ ರೈತರಿಗೆ ರೂ. 7.54 ಲಕ್ಷಗಳ ಪರಿಹಾರ ಧನವನ್ನು ಒದಗಿಸಬೇಕಾಗಿದೆ. ಇಲ್ಲಿವರೆಗೆ 172 ರೈತರಿಗೆ ರೂ. 5.45 ಲಕ್ಷಗಳ ಪರಿಹಾರ ಮೊತ್ತ ಪಾವತಿಯಾಗಿರುತ್ತದೆ. ಹಾಗೂ ರೂ. 2.0854 ಲಕ್ಷಗಳ ಪರಿಹಾರ ಮೊತ್ತ ಪಾವತಿಗೆ ಬಾಕಿ ಇರುತ್ತದೆ. |
| ಈ | ಈ ಹಣವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆಗೊಳಿಸಲಾಗುವುದು; ಹಾನಿಗೀಡಾಗಿರುವ ತೋಟಗಾರಿಕೆ ಬೆಳೆಗಳ ಪುನ:ಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕಂದಾಯ ಇಲಾಖೆಯಿಂದ ಪಾವತಿಗೆ ಬಾಕಿ ಇರುವ ಪರಿಹಾರ ಮೊತ್ತವನ್ನು ಪರಿಹಾರ ತಂತ್ರಾಂಶದಲ್ಲಿ ಪಾವತಿ ಮಾಡಲಾಗುತ್ತಿದೆ.<br><br>ಹಾನಿಗೀಡಾಗಿರುವ ತೋಟಗಾರಿಕೆ ಬೆಳೆಗಳ ಪುನ:ಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಕೆಳಗಿನಂತಿವೆ:-<br>✓ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಕೆಳಕಾಣಿಸಿದ ವಿವರಗಳಂತೆ ಸಹಾಯಧನ ಒದಗಿಸಲಾಗುತ್ತಿದೆ:-<br>1. ಕಾಳುಮೆಣಸು (ಶೇ 40 ರಂತೆ, ರೂ 20000/ಹೆ; ಗರಿಷ್ಟ 2 ಹೆ)<br>2. ಗೇರು (ಶೇ 40 ರಂತೆ, ರೂ 12000/ಹೆ; ಗರಿಷ್ಟ 2 ಹೆ)<br>3. ಕೋಕೋ (ಶೇ 40 ರಂತೆ, ರೂ 12000/ಹೆ; ಗರಿಷ್ಟ 2 ಹೆ)<br><br>✓ ಪುನ:ಶ್ಚೇತನ ಕಾರ್ಯಕ್ರಮದಡಿ ಕಾಳುಮೆಣಸು ಮತ್ತು ಗೇರು ಬೆಳೆಗಳ ಪುನಃಶ್ಚೇತನಕ್ಕೆ ಕೆಳಕಾಣಿಸಿದ ವಿವರಗಳಂತೆ ಸಹಾಯ ಧನ ನೀಡಲಾಗುತ್ತಿದೆ. ಶೇ. 50 ರಂತೆ, ರೂ 20000/ಹೆ, ಗರಿಷ್ಟ 2 ಹೆ.<br><br>✓ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅಡಕೆ ಪ್ರದೇಶ ವಿಸ್ತರಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. |

**HORTI 531 HGM 2024**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಇಲಾಖೆ**